Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 32/2020

ಪ್ರಾ.ಸಾ. 5 ಚಾ.ಸಾ 2

| | | |
|---|---|---|
| ಹೆಸರು | : | ಸಾಬರಡ್ಡಿ |
| ತಂದೆಯ ಹೆಸರು | : | ಹಣಮಂತಪ್ಪ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಕೌಳುರು |

## ಪ್ರಮಾಣ ವಚನ ಭೋಧಿಸಿದ ದಿನಾಂಕಃ 07-11-2025
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-3 ರವರ ಪರಿಚಯ ಇರುವುದಿಲ್ಲ. ಸುಮಾರು 2-3 ವರ್ಷಗಳ ಹಿಂದೆ ಯಾದಗಿರಿ ಗ್ರಾಮೀಣ ಪೊಲೀಸ ಠಾಣೆಗೆ ಹೋದಾಗ ಒಂದು ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲೆ ಪಂಚನಾಮೆ ಆಗಿದ್ದು, ಪಂಚನಾಮೆಯನ್ನು ಅದನ್ನು ನಿ.ಪಿ.18 ಎಂದು ಗುರುತಿಸಲಾಗಿದ್ದು ಸಾಕ್ಷಿದಾರರ ಸಹಿಯನ್ನು **ನಿ.ಪಿ.18(ಬಿ)** ಎಂದು ಗುರುತಿಸಲಾಯಿತು. ನನ್ನನ್ನು ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಕರೆಯಿಸಿ ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ. ಪುನಃ ನನ್ನನ್ನು ಪೊಲೀಸರು ಬೇರೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ ಮತ್ತು ನನ್ನ ಸಮಕ್ಷಮ ಕಚ್ಚಾ ನಕಾಶೆಯನ್ನು ತಯಾರಿಸಿರುವುದಿಲ್ಲ. ಸದರಿ ಕಚ್ಚಾ ನಕಾಶೆಯನ್ನು ಈಗಾಗಲೇ ನಿ.ಪಿ.19 ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.19(ಬಿ)** ಎಂದು ಗು ರುತಿಸಲಾಯಿತು. ಒಟ್ಟು 6 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.20 ರಿಂದ 25 ಎಂದು ಗುರುತಿಸಲಾಗಿದೆ.

2. ದಿಃ 04.01.2020 ರಂದು ಮಾಡಿದಂತಹ ಪಂಚನಾಮೆಯನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿ.ಪಿ.10 ಎಂದು ಸಾಕ್ಷಿದಾರರ ಸಹಿಯನ್ನು

**ನಿ.ಪಿ.10(ಬಿ)** ಎಂದು ಗುರುತಿಸಲಾಯಿತು. ಒಟ್ಟು 6 ಭಾವಚಿತ್ರಗಳನ್ನು ತೋರಿಸಿದ್ದು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ.12 ರಿಂದ 17 ಎಂದು ಗುರುತಿಸಲಾಗಿದೆ.

3. ದಿಃ 04.01.2020 ರಂದು ಸಂಜೆ 8.30-9.00 ಗಂಟೆಯವರೆಗೆ ಮಾಡಿದಂತಹ ಅಮಾನತ್ತು ಪಂಚನಾಮೆಯನ್ನು ತೋರಿಸಿಲಾಗಿದ್ದು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.4 ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.4(ಬಿ)** ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.5 ಮತ್ತು 6 ಎಂದು ಗುರುತಿಸಲಾಗಿದೆ.

4. ದಿಃ 04.01.2020 ರಂದು ಸಾಯಂಕಾಲ 6.10-7.00 ಗಂಟೆಯವೆರೆಗೆ ಕಾರ ಜಪ್ತಿ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.7 ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.7(ಬಿ)** ಎಂದು ಗುರುತಿಸಲಾಯಿತು. ಈ ಎಲ್ಲ ಪಂಚನಾಮೆಗಳು ಯಾವ ಕಾರಣಕ್ಕಾಗಿ ಮಾಡಿರುತ್ತಾರೆ ಮತ್ತು ಯಾವ್ಯಾವ ಸ್ಥಳದಲಿ ಮಾಡಿರುತ್ತಾರೆ ಮತ್ತು ಯಾರ ಯಾರ ಸಮಕ್ಷಮ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಮತ್ತು ಯಾವ ಕಾರಣಕ್ಕಾಗಿ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ.

(**ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.**)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

5. ದಿಃ 04.01.2020 ರಂದು ಮಧ್ಯಾಹ್ನ 2.00-3.00 ಗಂಟೆಯವರೆಗ ನನ್ನನ್ನು ಹಾಗೂ ಚಾಸಾ-3 ರವರನ್ನು 1ನೇ ಆರೋಪಿ ತೋರಿಸಿದಂತೆ ಕೃತ್ಯನಡೆದ ಸ್ಥಳವನ್ನು ತೋರಿಸಿದ ಮೇರೆಗೆ ನಿ.ಪಿ.18 ರಂತೆ ಪಂಚನಾಮೆ ಮಾಡಿ ಬರೆದು ಓದಿ ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯಕ್ಕೆ ಸ್ಥಳದಲ್ಲಿ ನಿ.ಪಿ.20 ರಿಂದ 25 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

6. ಅದೇ ದಿನ ಸಂಜೆ 4.10-5.15 ರವರೆಗೆ ಮೃತ ದೇಹವನ್ನು ಬಿಸಾಡಿದ ಸಿಂದಗಿ-ಕೊಡಂಗಲ್ ರಾಷ್ಟ್ರೀಯ ಹೆದ್ದಾರಿಯ ಧರಮಪೂರ ಸೀಮಾಂತರದ ಗ್ರಾಮದಲ್ಲಿ ನಿ.ಪಿ.10 ರಂತೆ ಸ್ಥಳಪಂಚನಾಮೆ ಮಾಡಿ ಓದಿ ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಿ.ಪಿ.12 ರಿಂದ 17 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

7. ಅದೇ ದಿನ ಸಾಯಂಕಾಲ 6.10-7.00 ಗಂಟೆಯವರೆಗೆ 2 ನೇ ಆರೋಪಿತನ ಮನೆಯ ಹಿಂದುಗಡೆ ಸಾರ್ವಜನಿಕ ರಸ್ತೆಯ ಮೇಲೆ ನಿಲ್ಲಿಸಿದ ಕಾರ ಸಂಖ್ಯೆ ಕೆಎ-33-ಎಮ್-1830 ನೆದ್ದನ್ನು 2 ನೇ ಆರೋಪಿ ಹಾಜರುಪಡಿಸಿದಂತೆ ಜಪ್ತಿಪಂಚನಾಮೆಯನ್ನು ನಿ.ಪಿ.7 ರಂತೆ ಮಾಡಿ ಓದಿ ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿ.ಪಿ.8 ಮತ್ತು 9 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆಸ ರಿಯಲ್ಲ.

8. ಅದೇ ದಿನ ರಾತ್ರಿ 8.30-9.00 ಗಂಟೆಯವರೆಗೆ ಸುರಪುರ ನಗರದ 1 ನೇ ಅರೋಪಿತಳ ಮನೆಯಲ್ಲಿ 1 ನೇ ಆರೋಪಿತಳು ಹಾಜರುಪಡಿಸಿದ ತಲೆ ದಿಂಬನ್ನು ನಿ.ಪಿ.4 ರಂತೆ ಜಪ್ತಿ ಪಂಚನಾಮೆ ಮಾಡಿ ಓದಿ ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿ.ಪಿ.5 ಮತ್ತು 6 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

9. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 1 ನೇ ಆರೋಪಿಯ ಪರವಾಗಿ ಶ್ರೀ. ಎಮ್.ಎಮ್.ಇ ವಕೀಲರಿಂದ</u>

- ಸಾಕ್ಷಿಗೆ ಪಾಟೀ ಸವಾಲ ಇಲ್ಲವೆಂದು ನುಡಿಯುತ್ತಾರೆ

<u>ಪಾಟೀ ಸವಾಲು 2 ನೇ ಆರೋಪಿಯ ಪರವಾಗಿ ಶ್ರೀ. ಬಿ.ಬಿ.ಕೆ ವಕೀಲರಿಂದ</u>

- ಸಾಕ್ಷಿಗೆ ಪಾಟೀ ಸವಾಲ ಇಲ್ಲವೆಂದು ನುಡಿಯುತ್ತಾರೆ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 32/2020

ಪ್ರಾ.ಸಾ. 6 ಚಾ.ಸಾ 4

| | | |
|---|---|---|
| ಹೆಸರು | : | ಅನಂತಕುಮಾರ |
| ತಂದೆಯ ಹೆಸರು | : | ವಿಜಯಕುಮಾರ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ತಾಲೂಕಾ ಆರೋಗ್ಯ ಕೇಂದ್ರ, ಯಾದಗಿರಿ |
| ವಾಸ | : | ಯಾದಗಿರಿ |

## ಪ್ರಮಾಣ ವಚನ ಭೋಧಿಸಿದ ದಿನಾಂಕ: 07-11-2025
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

1 ನೇ ಆರೋಪಿ 2021 ರಲ್ಲಿ ನನ್ನ ಮನೆಯಲ್ಲಿ ಬಾಡಿಗೆಗೆ ಇದ್ದರು. 1 ನೇ ಆರೋಪಿತಳೊಂದಿಗೆ ಆಕೆಯ ಗಂಡನ್ನು ಇದ್ದನು. ಆಕೆಯ ಗಂಡನ ಹೆಸರು ನನಗೆ ಗೊತ್ತಿರುವುದಿಲ್ಲ. 1 ನೇ ಆರೋಪಿಳ ಗಂಡ ಪೋಟೊಗ್ರಾಫರ ಆಗಿ ಕೆಲಸ ಮಾಡುತ್ತಿದ್ದ. 1 ನೇ ಆರೋಪಿ ಮತ್ತು ಆಕೆಯ ಗಂಡನಿಗೆ ಇಬ್ಬರು ಮಕ್ಕಳು ಇದ್ದರು. 1 ನೇ ಆರೋಪಿಳು ತನ್ನ ಗಂಡನೊಂದಿಗೆ ಚೆನ್ನಾಗಿ ಇದ್ದರು. 2 ನೇ ಆರೋಪಿಯ ಪರಿಚಯ ಇರುವುದಿಲ್ಲ. 1 ನೇ ಆರೋಪಿತಳ ಗಂಡ ಜಗನಾಥ ಬದುಕಿರುತ್ತಾರೋ ಅಥವಾ ಸತ್ತಿರುತ್ತಾರೋ ಗೊತ್ತಿರುವುದಿಲ್ಲ. ಈ ಕೇಸಿನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಮತ್ತು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು**

**ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

2. ಒಂದನೇ ಆರೋಪಿಳ ಗಂಡನ ಹೆಸರು ಜಗನಾಥ ಎಂದು ಇರುತ್ತದೆ ಎಂದರೆ ಸರಿ. 1 ನೇ ಆರೋಪತಳ ಗಂಡ ಮಧ್ಯೆ ಸೇವನೆ ಮಾಡಿಕೊಂಡು ಆಗಾಗ 1 ನೇ ಅರೋಪಿತಳೊಂದಿಗೆ ಜಗಳ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆಗ 2 ನೇ ಆರೋಪಿಯು ಸಹ ಮೃತನ ಮನೆಗೆ ಆಗಾಗ ಬಂದು ಹೋಗುತ್ತಿದ್ದನು ಎಂದರೆ ಸರಿಯಲ್ಲ.

3. ದಿಃ 04.01.2020 ರಂದು ಮಧ್ಯಾಹ್ನ ನಾನು ನನ್ನ ಕಛೇರಿಯಲ್ಲಿ ಇದ್ದಾಗ 1 ನೇ ಮತ್ತು 2 ನೇ ಆರೋಪಿತರು ಪೊಲೀಸರು ಕರೆದುಕೊಂಡು ನಮ್ಮ ಮನೆಗೆ ಬಂದಿದ್ದು ಗೊತ್ತಾಯಿತು ಎಂದರೆ ಸರಿಯಲ್ಲ. ಪೇಬ್ರುವರಿ 22-2019 ರಂದು ರಾತ್ರಿ 11.40 ರ ಸುಮಾರಿಗೆ ಜಗನಾಧನಿಗೆ ತಲೆದಿಂಬಿನಿಂದ ಉಸಿರುಗಟ್ಟಿಸಿ ಸಾಯಿಸಿ ಹೆಣವನ್ನು ತೆಗೆದುಕೊಂಡು ಗುರುಮಠಕಲ್ ಸಮೀಪದಲ್ಲಿ ಗುಡ್ಡಗಾಡಿನಲ್ಲಿ ಹಾಕಿರುತ್ತೇವೆ ಎಂದು ತಿಳಿಸಿದರು ಎಂನದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರ ಅನ್ಯೆತಿಕ ಸಂಬಂಧದಿಂದಾಗಿ ಜಗನಾಥನನ್ನು ಕೊಂದು ಹಾಕಿರುತ್ತಾರೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಕುರಿತು ನಾನು ಪೊಲೀಸರಿಗೆ ಈಗ ವಿವರವಾಗಿ ಓದಿ ಹೇಳಿದಂತೆ ನಿ.ಪಿ.28 ರಂತೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

4. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 1 ನೇ ಆರೋಪಿಯ ಪರವಾಗಿ ಶ್ರೀ. ಎಮ್.ಎಮ್.ಇ ವಕೀಲರಿಂದ</u>

- ಸಾಕ್ಷಿಗೆ ಪಾಟೀ ಸವಾಲ ಇಲ್ಲವೆಂದು ನುಡಿಯುತ್ತಾರೆ

<u>ಪಾಟೀ ಸವಾಲು 2 ನೇ ಆರೋಪಿಯ ಪರವಾಗಿ ಶ್ರೀ. ಬಿ.ಬಿ.ಕೆ ವಕೀಲರಿಂದ</u>

- ಸಾಕ್ಷಿಗೆ ಪಾಟೀ ಸವಾಲ ಇಲ್ಲವೆಂದು ನುಡಿಯುತ್ತಾರೆ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 32/2020

ಪ್ರಾ.ಸಾ. 7 ಚಾ.ಸಾ 5

| | | |
|---|---|---|
| ಹೆಸರು | : | ಚಂದ್ರಕಲಾ |
| ಗಂಡನ ಹೆಸರು | : | ಅನಂತಕುಮಾರ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 07-11-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-4 ನನ್ನ ಗಂಡನಾಗಿರುತ್ತಾನೆ. 1 ನೇ ಆರೋಪಿತಳು ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದರು ಆದರೆ ಯಾವಾಗ ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಆರೋಪಿತಳ ಗಂಡನ ಹೆಸರು ನನಗೆ ಗೊತ್ತಿರುವುದಿಲ್ಲ. 1 ನೇ ಆರೋಪಿತಳ ಗಂಡ ಜೀವಂತ ಇರುತ್ತಾನೋ ಇಲ್ಲವೋ ಗೊತ್ತಿರುವುದಿಲ್ಲ. ಈ ಕೇಸಿನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

2. ಒಂದನೇ ಆರೋಪಿಳ ಗಂಡನ ಹೆಸರು ಜಗನಾಥ ಎಂದು ಇರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿ ತಳ ಗಂಡ ಮಧ್ಯ ಸೇವನೆ ಮಾಡಿಕೊಂಡು

ಆಗಾಗ 1 ನೇ ಅರೋಪಿತಳೊಂದಿಗೆ ಜಗಳ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆಗ 2 ನೇ ಆರೋಪಿಯು ಸಹ ಮೃತನ ಮನೆಗೆ ಆಗಾಗ ಬಂದು ಹೋಗುತ್ತಿದ್ದನು ಎಂದರೆ ಸರಿಯಲ್ಲ.

3. ದಿಃ 04.01.2020 ರಂದು ಮಧ್ಯಾಹ್ನ ನಾನು ಮನೆಯಲ್ಲಿ ಇದ್ದಾಗ 1 ನೇ ಮತ್ತು 2 ನೇ ಆರೋಪಿತರು ಪೊಲೀಸರು ಕರೆದುಕೊಂಡು ನಮ್ಮ ಮನೆಗೆ ಬಂದಿದ್ದು ಗೊತ್ತಾಯಿತು ಎಂದರೆ ಸರಿಯಲ್ಲ. ಪೇಬ್ರುವರಿ 22-2019 ರಂದು ರಾತ್ರಿ 11.40 ರ ಸುಮಾರಿಗೆ ಜಗನಾಥನಿಗೆ ತಲೆದಿಂಬಿನಿಂದ ಉಸಿರುಗಟ್ಟಿಸಿ ಸಾಯಿಸಿ ಹೆಣವನ್ನು ತೆಗೆದುಕೊಂಡು ಗುರುಮಠಕಲ್ ಸಮೀಪದಲ್ಲಿ ಗುಡ್ಡಗಾಡಿನಲ್ಲಿ ಹಾಕಿರುತ್ತೇವೆ ಎಂದು ತಿಳಿಸಿದರು ಎಂನದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರ ಅನೈತಿಕ ಸಂಬಂಧದಿಂದಾಗಿ ಜಗನಾಥನನ್ನು ಕೊಂದು ಹಾಕಿರುತ್ತಾರೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಕುರಿತು ನಾನು ಪೊಲೀಸರಿಗೆ ಈಗ ವಿವರವಾಗಿ ಓದಿ ಹೇಳಿದಂತೆ **ನಿ.ಪಿ.29** ರಂತೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

4. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 1 ನೇ ಆರೋಪಿಯ ಪರವಾಗಿ ಶ್ರೀ. ಎಮ್.ಎಮ್.ಇ ವಕೀಲರಿಂದ</u>

- ಸಾಕ್ಷಿಗೆ ಪಾಟೀ ಸವಾಲ ಇಲ್ಲವೆಂದು ನುಡಿಯುತ್ತಾರೆ

<u>ಪಾಟೀ ಸವಾಲು 2 ನೇ ಆರೋಪಿಯ ಪರವಾಗಿ ಶ್ರೀ. ಬಿ.ಬಿ.ಕೆ ವಕೀಲರಿಂದ</u>

- ಸಾಕ್ಷಿಗೆ ಪಾಟೀ ಸವಾಲ ಇಲ್ಲವೆಂದು ನುಡಿಯುತ್ತಾರೆ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.